ಏಕಲವ್ಯ ಪ್ರಕಾಶನ

# ದೋಣಿ ಸಾಗಲಿ... !

ಏಕಲವ್ಯ ಪ್ರಕಾಶನ

KANNADA



ವಿ. ಸುತೆಯೆವ್ವ



# ದೋಣಿ ಸಾಗಲಿ.. !

ಚಿತ್ರ ಮತ್ತು ಕತೆ
ವಿ. ಸುತೆಯೆವ್ಡ

ಏಕಲವ್ಯ ಪ್ರಕಾಶನ



# ದೋಣಿ ಸಾಗಲಿ...

**Doni Sagali..**

A picture story

Text and illustrations - V. SUTEYEV
From STORIES AND PICTURES
Progressive Publishers, MOSCOW
Kannada Translation: Prabhakar Nanawaty

This Kannada translation is supported by the Parag Initiative of Tata Trusts.

May 2018 / 1000 copies
July 2021 / 1000 copies
August 2023 / 2000 copies
Printed on 100 gsm Maplitho and 210 gsm paper board (cover)
ISBN: 978-93-85236-60-0
Price ₹ 55.00

Published by:
EKLAVYA FOUNDATION
Jamnalal Bajaj Parisar
Near Fortune Kasturi, Jatkhedi,
Bhopal - 462 026 (MP)
Phone: +91 755 - 297 7770, 71, 72, 73
www.eklavya.in / books@eklavya.in

Printed at: Bhandari Press, Bhopal (MP)

# ದೋಣಿ ಸಾಗಲಿ



ಒಂದು ದಿನ ಕಪ್ಪೆ, ಕೋಳಿಮರಿ, ಇಲಿಮರಿ, ಕಟ್ಟಿರುವೆ ಹಾಗು ತಗಣಿತಾಯಿ ಇವರೆಲ್ಲರು ತಿರುಗಾಡಲು ಹೊರಟರು.

ತಿರುಗುತ್ತ ತಿರುಗುತ್ತ ಕೆರೆ ದಂಡೆ ಮುಟ್ಟಿದರು.



“ನಡೆಯಿರಿ, ನಾವೀಗ ಈಜಾಡುವ.” ಎಂದೆನ್ನುತ್ತ ಕಪ್ಪೆ ಕೆರೆಯ ನೀರಿನಲ್ಲಿ ಜಿಗಿಯಿತು.



“ಆದರೆ ನಮಗೆ ಈಜು ಬರುವದಿಲ್ಲ.” ಎಂದು ಕೋಳಿ ಮರಿ, ಇಲಿಮರಿ, ಕಟ್ಟಿರುವೆ ಹಾಗು ತಗಣಿತಾಯಿ ಒಂದೇ ದನಿಯಲ್ಲಿ ಹೇಳಿದವು.

“ಟರ್! ಟರ್ ಕ!! ಹಾಗಿದ್ದರೆ ನಿಮಗೆ ಇಲ್ಲಿ ಯಾವ ಕೆಲಸವಿಲ್ಲ.” ಎಂದೆನ್ನುತ್ತ ಕಪ್ಪೆ ನಗತೊಡಗಿತು. ನಗುತ್ತಲೇ ಇತ್ತು. ಹೀಗೆ ನಗುತ್ತಿರುವಾಗ ಅದು ಒಮ್ಮಿಂದೊಮ್ಮೆಲೆ ಉಸಿರುಗಟ್ಟಿತು.



ಕೋಳಿ ಮರಿ, ಇಲಿ ಮರಿ, ಕಟ್ಟಿರುವೆ ಹಾಗು ತಗಣಿತಾಯಿ ಇವರೆಲ್ಲರಿಗೂ ಬಹಳ ಕೆಡುಕೆನಿಸಿತು. ಕಪ್ಪೆಯ ಸಮಸ್ಯೆಯ ಪರಿಹಾರದ ಬಗ್ಗೆ ಎಲ್ಲರೂ ಯೋಚಿಸತೊಡಗಿದರು. ಯೋಚನೆ ಮಾಡುತ್ತಿದ್ದಂತೆ ಅವರಿಗೆ ಒಂದು ಉಪಾಯ ಹೊಳೆಯಿತು.


ಕೋಳಿ ಮರಿಯು ಬೇಗ ಬೇಗ
ಹೋಗಿ ಒಂದು ಎಲೆಯನ್ನು
ತೆಗೆದುಕೊಂಡು ಬಂತು.



ಇಲಿ ಮರಿಯು ಅಕ್ರೋಡದ
ಅರ್ಧಸಿಪ್ಪೆಯನ್ನು...



ಹುಡುಕಿಕೊಂಡು ತಿರುಗಿ
ಬಂತು.



ಕಟ್ಟಿರುವೆ ಒಂದು ಬಿದಿರಿನ ಕಡ್ಡಿಯನ್ನು
ಹುಡುಕಿಕೊಂಡು ತಂದಿತು.

ತಗಣಿತಾಯಿ ಒಂದು ಉದ್ದವಾದ ಕರಿ
ದಾರವನ್ನು ತಂದಿತು.






ಇವರೆಲ್ಲ ಒಟ್ಟಾಗಿ ಕೆಲಸ ಮಾಡತೊಡಗಿದರು. ಬಿದಿರಿನ ಕಡ್ಡಿಯನ್ನು ಅಕ್ರೋಡದ ಸಿಪ್ಪೆಯಲ್ಲಿ ಬಿಗಿಯಾಗಿ ಸಿಕ್ಕಿಸಿದರು. ಎಲೆಯಲ್ಲಿ ದಾರವನ್ನು ಪೋಣಿಸಿ ಅದನ್ನು ಬಿದಿರನ ಕಡ್ಡಿಗೆ ಕಟ್ಟಿದರು.

ನೋಡನೋಡುವಷ್ಟರಲ್ಲಿ ಒಂದು ಅಂದವಾದ ದೋಣಿ ತಯಾರಾಯಿತು.




ಆ ದೋಣಿಯನ್ನು ಆ ಮೇಲೆ ಕೆರೆಯ ನೀರಿನಲ್ಲಿ ನೂಕಿದರು. ಅವರೆಲ್ಲರು ಅದರಲ್ಲಿ ಹೋಗಿ ಕುಳಿತರು. ದೋಣಿಯು ನೀರಿನಲ್ಲಿ ತೇಲುತ್ತ ಮುಂದೆ ಮುಂದೆ ಹೋಗತೊಡಗಿತು.



ಇವರ ದನಿ ಕೇಳಿ ಕಪ್ಪೆ
ತನ್ನ ತಲೆಯನ್ನು ನೀರಿನ
ಹೊರಗೆ ತೆಗೆಯಿತು.
ಅದಕ್ಕೆ ಮತ್ತೊಮ್ಮೆ
ನಗಬೇಕೆಂದು
ಅನ್ನಿಸುತ್ತಿತ್ತು. ಆದರೆ
ಅಷ್ಟರಲ್ಲಿ ದೋಣಿ ಮುಂದೆ
ಮುಂದೆ
ಸರಿಯತೊಡಗಿತು.

ದೋಣಿಯು ಸಾಕಷ್ಟು ದೂರ ಹೋಗಿದ್ದರಿಂದ ಕಪ್ಪೆಗೆ ಅದನ್ನು ಮುಟ್ಟಲು ಶಕ್ಯವಾಗಲಿಲ್ಲ.





ಏಕಲವ್ಯ ಪ್ರಕಾಶನ

parag
AN INITIATIVE OF
TATA TRUSTS

Price ₹ 55.00

9789385236600